ಈ ಕನ್ನಡ ಶಾಲೆಗಳನ್ನು ನೋಡಿ..

ರಾಜಧಾನಿ ಬೆಂಗಳೂರಿನಲ್ಲಿ ಕೆಲ ಸರ್ಕಾರಿ ಕನ್ನಡ ಶಾಲೆಗಳು ಖಾಸಗಿ, ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಸಮರ್ಪಕ ಪೈಪೋಟಿ ನೀಡುತ್ತಿವೆ. ಖಾಸಗಿ ಮತ್ತು ಸಮುದಾಯದ ಸಹಭಾಗಿತ್ವದಿಂದಾಗಿ ಈ ಶಾಲೆಗಳು ಮೂಲ ಸೌಕರ್ಯದೊಂದಿಗೆ ಬಲವರ್ಧನೆಗೊಂಡಿದ್ದು, ವಿದ್ಯಾರ್ಥಿಗಳನ್ನು ಸೆಳೆಯುತ್ತಿವೆ...

ವೈಟ್‌ಫೀಲ್ಡ್ ಬಳಿಯ ಇಮ್ಮಡಿಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ಅಗಸ್ತ್ಯ ಫೌಂಡೇಷನ್ ನಿರ್ಮಿಸಿಕೊಟ್ಟಿರುವ 'ಸೈನ್ಸ್ ಲ್ಯಾಬ್'

ಎಸ್. ಸಂಪತ್

ಸುಸಜ್ಜಿತ ಕಂಪ್ಯೂಟರ್ ಲ್ಯಾಬ್, ಭೌತ ವಿಜ್ಞಾನ, ರಸಾಯನ ವಿಜ್ಞಾನ ಲ್ಯಾಬ್‌ಗಳು, ಸ್ಮಾರ್ಟ್ ಕ್ಲಾಸ್‌ಗಳು, ಕೌಶಲಾಭಿವೃದ್ಧಿ ತರಗತಿಗಳು, ಸಂಗೀತ ಸಲಕರಣೆಗಳು, ಅತ್ಯಾಧುನಿಕ ಗ್ರಂಥಾಲಯ, 'ಸ್ವಡಿ ರೂಂ', ಸಿಸಿಟಿವಿ ಕ್ಯಾಮೆರಾ, ಶುದ್ಧ ಕುಡಿಯುವ ನೀರು, ಸೌರ ದೀಪದ ಸೌಲಭ್ಯಗಳ ಜತೆಗೆ ವಿದ್ಯಾರ್ಥಿಗಳಿಗೆ ವಿವಿಧ ವಿದ್ಯಾರ್ಥಿ ವೇತನಗಳು...

ಮುಖ್ಯ ಶಿಕ್ಷಕ ಶಿವಾರೆಡ್ಡಿ

ಇದು ಇಂಗ್ಲಿಷ್ ಮಾಧ್ಯಮದ ಖಾಸಗಿ 'ಹೈಟೆಕ್' ಶಾಲೆಯ ಚಿತ್ರಣವಲ್ಲ. ನಗರದ ಥಣಿಸಂದ್ರ, ಇಮ್ಮಡಿಹಳ್ಳಿ, ಶೀಗೆಹಳ್ಳಿ ಸರ್ಕಾರಿ ಕನ್ನಡ ಶಾಲೆಗಳ ಚಿತ್ರಣ.

ವೈಟ್‌ಫೀಲ್ಡ್, ಕಾಡುಗೋಡಿ, ಕೆ.ಆರ್.ಪುರ ಸಮೀಪದ ಈ ಭಾಗಗಳು ನಗರೀಕರಣದ ಹೊಡೆತಕ್ಕೆ ಸಿಲುಕಿ 'ಸಿಲಿಕಾನ್ ಸಿಟಿ'ಯ ಅಂಗವಾಗಿ ಬೆಳೆಯುತ್ತಿವೆ. ಹಲವಾರು ಬಹುರಾಷ್ಟ್ರೀಯ ಕಂಪನಿಗಳು, ದೊಡ್ಡ ಮಾಲ್‌ಗಳು ಹಾಗೂ ಬೃಹತ್ ವಸತಿ ಸಮುಚ್ಚಯಗಳು ಬೆಳೆದು ನಿಂತಿವೆ.

ಇದಕ್ಕೆ ಪೂರಕವಾಗಿ ಹಲವಾರು ಖಾಸಗಿ ಮತ್ತು ಇಂಗ್ಲಿಷ್ ಮಾಧ್ಯಮ ಶಾಲೆಗಳು ಇಲ್ಲಿವೆ. ಇಲ್ಲಿನ ಕೆಲ ಅಂತರರಾಷ್ಟ್ರೀಯ ಶಾಲೆಗಳಲ್ಲಿ ಪ್ರವೇಶ ಶುಲ್ಕವೇ ವರ್ಷಕ್ಕೆ 1.50 ಲಕ್ಷ ರೂಪಾಯಿ! ಮೂಲ ಸೌಕರ್ಯದ ಜತೆಗೆ ಗುಣಮಟ್ಟದ ಬೋಧನೆ ವಿಚಾರದಲ್ಲೂ ಖಾಸಗಿ ಶಾಲೆಗಳಿಗೆ ಸರಿಸಾಟಿಯಾಗಿ ನಿಲ್ಲುವಲ್ಲಿ ಈ ಮೂರು ಸರ್ಕಾರಿ ಶಾಲೆಗಳು ಯಶಸ್ವಿಯಾಗಿವೆ. ಇದರ ಪರಿಣಾಮ ಪ್ರತಿ ವರ್ಷ ಇಲ್ಲಿ ದಾಖಲಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಏರುತ್ತಿದೆ.

ಥಣಿಸಂದ್ರ ಶಾಲೆಯಲ್ಲಿ 986 ವಿದ್ಯಾರ್ಥಿಗಳು!: ಇಲ್ಲಿನ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆರಂಭವಾದದ್ದು 1945ರಲ್ಲಿ. 1994ರಲ್ಲಿ 230 ವಿದ್ಯಾರ್ಥಿಗಳಿದ್ದ ಸಂಖ್ಯೆ 2007ರವೇಳೆಗೆ 500 ದಾಟಿತ್ತು. 2010ರಲ್ಲಿ 600 ತಲುಪಿತ್ತು. ಈ ವರ್ಷ ಇಲ್ಲಿನ ವಿದ್ಯಾರ್ಥಿಗಳ ಸಂಖ್ಯೆ 986! ಇದರಲ್ಲಿ 491 ಬಾಲಕಿಯರು.

1994ರಲ್ಲಿ ಕೇವಲ ಐದು ಕೊಠಡಿಗಳಿದ್ದ ಈ ಶಾಲೆಯಲ್ಲೀಗ 23 ಕೊಠಡಿಗಳಿದ್ದು, 23 ಶಿಕ್ಷಕರಿದ್ದಾರೆ. ಇದೇ ಶಾಲೆಯಲ್ಲಿ ಸರ್ಕಾರಿ ಪ್ರೌಢಶಾಲೆ ಕೂಡ ಇದ್ದು, ಅಲ್ಲಿ 600 ವಿದ್ಯಾರ್ಥಿಗಳು ಓದುತ್ತಿದ್ದಾರೆ.

ಏನೇನು ಸೌಲಭ್ಯಗಳಿವೆ: ಕೆಲ ಎನ್‌ಜಿಒಗಳು ಇಲ್ಲಿನ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ ನಿರ್ಮಿಸಿಕೊಟ್ಟಿವೆ. ಎಲ್ಲ ಮಕ್ಕಳಿಗೂ ಕೂಡಲು ಡೆಸ್ಕ್ ಇವೆ. ನಲಿಕಲಿ ವಿಭಾಗದಲ್ಲಿ ಮಕ್ಕಳು ಕೂಡಲು 300 ಮ್ಯಾಟ್‌ಗಳಿವೆ. 'ಪ್ಯಾಡ್ ಬರ್ನಿಂಗ್', ವಿಜ್ಞಾನ ಪ್ರಯೋಗಾಲಯ ಮತ್ತು ಗ್ರಂಥಾಲಯಗಳಿವೆ. ಕಂಪ್ಯೂಟರ್ ಲ್ಯಾಬ್ ಇದ್ದು, ಅಲ್ಲಿ 10 ಕಂಪ್ಯೂಟರ್, ಎರಡು ಲ್ಯಾಪ್‌ಟಾಪ್‌ಗಳಿವೆ. 'ಮಾನ್ಯತಾ ರೋಟರಿ'ವತಿಯಿಂದ ಕೆಲ ಕೊಠಡಿಗಳು ನವೀಕರಣಗೊಂಡಿದ್ದು, ಕಂಪ್ಯೂಟರ್ ಲ್ಯಾಬ್ ಸುಸಜ್ಜಿತಗೊಂಡಿದೆ.

ಎನ್‌ಜಿಒಗಳ ನೆರವಿನಿಂದ ಇಲ್ಲಿ ಪ್ರತಿ ವರ್ಷ ನಡೆಯುವ ವಿಜ್ಞಾನ ಮೇಳಕ್ಕೆ ಸುತ್ತಮುತ್ತಲಿನ ಖಾಸಗಿ ಶಾಲಾ ವಿದ್ಯಾರ್ಥಿಗಳು ಭಾಗವಹಿಸುತ್ತಾರೆ. ಥಣಿಸಂದ್ರದಲ್ಲಿ ಒಟ್ಟು 64 ಖಾಸಗಿ ಶಾಲೆಗಳಿದ್ದರೆ, ಈ ಶಾಲೆಯ ಕೂಗಳತೆ ದೂರದಲ್ಲಿಯೇ ಏಳು ಖಾಸಗಿ ಶಾಲೆಗಳಿವೆ. ಅವುಗಳಿಗೆ ಸಮರ್ಪಕ ಪೈಪೋಟಿಯನ್ನು ನೀಡುತ್ತಿರುವ 'ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ'ಗೆ ನಾಗವಾರ, ಹೆಗ್ಡೆ ನಗರ, ಸಾರಾಯಿ ಪಾಳ್ಯ, ರಾಚೇನಹಳ್ಳಿ, ಥಣಿಸಂದ್ರದ ವ್ಯಾಪ್ತಿಯ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಿದ್ದಾರೆ ಎನ್ನುತ್ತಾರೆ ಮುಖ್ಯ ಶಿಕ್ಷಕ ತಿಮ್ಮಪ್ಪ ಮತ್ತು ಹಿರಿಯ ಶಿಕ್ಷಕಿ ಸುನಂದಾ ಬಾಯಿ. ಶಾಲೆಗೆ ಕೊಳವೆಬಾವಿ ಮತ್ತು ಮಕ್ಕಳು ಬಿಸಿಯೂಟ ಸೇವಿಸಲು 'ಹಾಲ್' ನಿರ್ಮಿಸಬೇಕಿದ್ದು, ಅದಕ್ಕಾಗಿ ದಾನಿಗಳ ನಿರೀಕ್ಷೆಯಲ್ಲಿದ್ದೇವೆ ಎನ್ನುತ್ತಾರೆ ಅವರು.

ಸಾಟಿಯಿಲ್ಲದ ಇಮ್ಮಡಿಹಳ್ಳಿ ಶಾಲೆ: 1980ರಲ್ಲಿ ಪ್ರಾರಂಭವಾಗಿರುವ ಇಮ್ಮಡಿಹಳ್ಳಿಯ ಸರ್ಕಾರಿ ಪ್ರೌಢಶಾಲೆ ವೈಟ್‌ಫೀಲ್ಡ್ ವ್ಯಾಪ್ತಿಯಲ್ಲಿ ಅಸ್ತಿತ್ವ ಉಳಿಸಿಕೊಂಡಿರುವ ಮತ್ತೊಂದು ಕನ್ನಡ ಶಾಲೆ. ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಮಹರಾಷ್ಟ್ರದಿಂದ ಉದ್ಯೋಗ ಅರಸಿ ಈ ಭಾಗದಲ್ಲಿನ ಐಟಿ ಕಂಪನಿಗಳು, ಎಂಎನ್‌ಸಿ ಕಚೇರಿಗಳು, ಮಾಲ್‌ಗಳು, ಆಸ್ಪತ್ರೆಗಳು, ಅಪಾರ್ಟ್‌ಮೆಂಟ್‌ಗಳಲ್ಲಿ ಕೆಲಸ ಮಾಡುತ್ತಿರುವ ಸೆಕ್ಯುರಿಟಿ ಸೇರಿದಂತೆ ಇತರ ಕಾರ್ಮಿಕ ವರ್ಗದವರ ಮಕ್ಕಳು ಈ ಶಾಲೆಯಲ್ಲಿ ಪಾಠ ಕಲಿಯುತ್ತಿದ್ದಾರೆ. ಅಷ್ಟೇ ಅಲ್ಲ ಎರಡು ವರ್ಷಗಳ ಹಿಂದೆ ಟಿಬೆಟ್ ಮತ್ತು ಶ್ರೀಲಂಕಾದ ಪೋಷಕರ ಇಬ್ಬರು ಮಕ್ಕಳು ಸಹ ಇಲ್ಲಿನ ಕನ್ನಡ ಮಾಧ್ಯಮದಲ್ಲಿಯೇ ಕಲಿತು 10ನೇ ತರಗತಿ ಉತ್ತೀರ್ಣರಾಗಿದ್ದಾರೆ.

ಒಂಬತ್ತು ಎಕರೆಯಷ್ಟು ಆಟದ ಮೈದಾನ ಹೊಂದಿರುವ ಈ ಶಾಲೆಯಲ್ಲಿ ಮೂಲ ಸೌಕರ್ಯಕ್ಕೆ ಕೊರತೆಯಿಲ್ಲ. ಸಮುದಾಯ ಸಹಭಾಗಿತ್ವದಡಿ ಐಟಿಪಿಎಲ್‌ನಲ್ಲಿರುವ ವಿವಿಧ ಐಟಿ ಕಂಪನಿಗಳು, 'ರೋಟರಿ ಐಟಿ ಕಾರಿಡಾರ್', 'ಬಾಲೋತ್ಸವ' ಎನ್‌ಜಿಒ, 'ಕ್ಯಾಬ್ ಜರ್ಮನಿ' ಕಂಪನಿಯ ಎಸ್‌ಆರ್‌ಎಫ್ ಪ್ರತಿಷ್ಠಾನ, ಅವಸರ್ ಪ್ರತಿಷ್ಠಾನ, ಅಗಸ್ತ್ಯ ಫೌಂಡೇಷನ್ ಸೇರಿದಂತೆ ಹಲವು ಸಂಸ್ಥೆಗಳು ಉದಾರ ಕೊಡುಗೆ ನೀಡಿ ಅಗತ್ಯ ಮೂಲ ಸೌಕರ್ಯವನ್ನು ಈ ಶಾಲೆಗೆ ಕಲ್ಪಿಸಿವೆ. 2012ರಿಂದ ಇಲ್ಲಿಯವರೆಗೆ ಈ ಸಂಸ್ಥೆಗಳೆಲ್ಲ ಸೇರಿ ಅಂದಾಜು 1.50 ಕೋಟಿ ರೂಪಾಯಿ ಖರ್ಚು ಮಾಡಿ ವಿವಿಧ ಸೌಕರ್ಯಗಳನ್ನು ಈ ಶಾಲೆಗೆ ಒದಗಿಸಿವೆ.

ಅಗಸ್ತ್ಯ ಪ್ರತಿಷ್ಠಾನ ಅತ್ಯಾಧುನಿಕ 'ಸೈನ್ಸ್ ಲ್ಯಾಬ್', 'ಕ್ಯಾಬ್ ಜರ್ಮನಿ' ಸುಸಜ್ಜಿತ ಗ್ರಂಥಾಲಯ ಮತ್ತು ಅಧ್ಯಯನ ಕೊಠಡಿ, 'ರೋಟರಿ ಐಟಿ ಕಾರಿಡಾರ್' 35 ಲ್ಯಾಪ್‌ಟಾಪ್ ನೀಡುವುದರ ಜತೆಗೆ ಕಂಪ್ಯೂಟರ್ ಲ್ಯಾಬ್ ನಿರ್ಮಿಸಿಕೊಟ್ಟಿವೆ. ಜತೆಗೆ ರೋಟರಿ ಇಲ್ಲಿನ ವಿದ್ಯಾರ್ಥಿಗಳಿಗಾಗಿ 350 ಸೌರ ದೀಪಗಳನ್ನು ನೀಡಿದೆ. 10ನೇ ತರಗತಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಡಿಸೆಂಬರ್ ಅಥವಾ ಜನವರಿಯಲ್ಲಿ ಈ ಸೌರ ದೀಪಗಳನ್ನು ಶಾಲೆಯವರು ಚಾರ್ಜ್ ಮಾಡಿ ಕೊಡುತ್ತಾರೆ. ಮೂರು ದಿನಕ್ಕೊಮ್ಮೆ ಶಾಲೆಗೆ ತಂದು ವಿದ್ಯಾರ್ಥಿಗಳು ಇದನ್ನು ಚಾರ್ಜ್ ಮಾಡಿಕೊಂಡು ಮನೆಗೆ ಒಯ್ಯುತ್ತಾರೆ. ಪರೀಕ್ಷೆ ನಂತರ ಸೌರ ದೀಪಗಳನ್ನು ಶಾಲೆಗೆ ಹಿಂತಿರುಗಿಸುತ್ತಾರೆ. ಇದರಿಂದ ಪರೀಕ್ಷಾ ತಯಾರಿಗೆ ವಿದ್ಯುತ್ ಸಮಸ್ಯೆ ಅಡ್ಡಿಯಾಗುವುದಿಲ್ಲ.

ಬಾಲೋತ್ಸವ ಎನ್‌ಜಿಒ ಇಲ್ಲಿಗೆ ಎರಡು 'ಸ್ಮಾರ್ಟ್ ಕ್ಲಾಸ್' ಮತ್ತು 'ಬಯೋಮೆಟ್ರಿಕ್' ಸಲಕರಣೆಗಳನ್ನು ನೀಡಿದೆ. ಈ ಶಾಲೆಯ ಎಲ್ಲ ಶಿಕ್ಷಕರು ನಿತ್ಯ ಶಾಲೆಗೆ ಬರುವಾಗ ಮತ್ತು ಹೊರಡುವಾಗ ಬಯೋಮೆಟ್ರಿಕ್‌ನಲ್ಲಿ ಹಾಜರಾತಿಯನ್ನು ದಾಖಲಿಸುತ್ತಿದ್ದಾರೆ. ಶಾಲೆಯ ಕಾರಿಡಾರ್ ಮತ್ತು ಆವರಣ ಸಿಸಿಟಿವಿ ಕಣ್ಗಾವಲಿಗೆ ಒಳಪಟ್ಟಿದೆ ಎನ್ನುತ್ತಾರೆ ಶಾಲೆಯ ಮುಖ್ಯ ಶಿಕ್ಷಕ ಎನ್. ಶಿವಾರೆಡ್ಡಿ.

ಉನ್ನತ ಶಿಕ್ಷಣಕ್ಕೂ ನೆರವು: ಈ ಶಾಲೆಯಲ್ಲಿ ಅತ್ಯುತ್ತಮ ಅಂಕಗಳಿಸುವ ಕೆಲ ವಿದ್ಯಾರ್ಥಿಗಳಿಗೆ ಅವಸರ್ ಪ್ರತಿಷ್ಠಾನ ಉನ್ನತ ಶಿಕ್ಷಣದ ಖರ್ಚು ವೆಚ್ಚವನ್ನು ಭರಿಸುತ್ತಿದೆ. ಇದರ ಸೌಲಭ್ಯ ಪಡೆದ ಇಬ್ಬರು ವಿದ್ಯಾರ್ಥಿಗಳು ವೈದ್ಯಕೀಯ ಮತ್ತು ಒಬ್ಬರು ಎಂಜಿನಿಯರಿಂಗ್ ಶಿಕ್ಷಣ ಪಡೆಯುತ್ತಿದ್ದಾರೆ. ಒಬ್ಬರು ಎಂಎನ್‌ಸಿಯೊಂದರಲ್ಲಿ ಉದ್ಯೋಗ ಪಡೆದಿದ್ದಾರೆ. ಇದೇ ರೀತಿ ರೋಟರಿ ಮತ್ತು ಬಾಲೋತ್ಸವ ಸಂಸ್ಥೆಗಳೂ ಕೆಲ ವಿದ್ಯಾರ್ಥಿಗಳನ್ನು ದತ್ತು ಪಡೆದು ಅವರ ಉನ್ನತ ಶಿಕ್ಷಣಕ್ಕೆ ನೆರವಾಗುತ್ತಿವೆ ಎಂದು ಅವರು ವಿವರಿಸುತ್ತಾರೆ.

'ಈ ಶಾಲೆಯ ಐದು ಕಿ.ಮೀ ವ್ಯಾಪ್ತಿಯಲ್ಲಿ 15 ಖಾಸಗಿ ಪ್ರೌಢಶಾಲೆಗಳಿವೆ. ಇವುಗಳಿಗೆ ಪೈಪೋಟಿ ನೀಡುತ್ತಿರುವ ನಮ್ಮ ಶಾಲೆಯಲ್ಲಿ ಒಟ್ಟು 450 ವಿದ್ಯಾರ್ಥಿಗಳಿದ್ದಾರೆ. ಶಾಲೆಯಲ್ಲಿನ ಸೌಕರ್ಯ ಮತ್ತು ಸೌಲಭ್ಯಗಳನ್ನು ಗಮನಿಸಿರುವ ಸಮೀಪದ ಖಾಸಗಿ ಶಾಲೆಯ 15 ವಿದ್ಯಾರ್ಥಿಗಳು ಎರಡು ವರ್ಷಗಳಲ್ಲಿ ಇಲ್ಲಿ ಪ್ರವೇಶ ಪಡೆದಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ನೆರವಾಗುತ್ತಿರುವ 75 ಸಂಸ್ಥೆಗಳು

ಸಲೀಂ ಪಾಷಾ,

ವೈಟ್‌ಫೀಲ್ಡ್, ವರ್ತೂರು, ಕೆ.ಆರ್.ಪುರ ಸುತ್ತಮುತ್ತಲಿನ ಸರ್ಕಾರಿ ಮತ್ತು ಕನ್ನಡ ಮಾಧ್ಯಮ ಶಾಲೆಗಳ ಬಲವರ್ಧನೆಗೆ ಸುಮಾರು 75ಕ್ಕೂ ಹೆಚ್ಚು ಸಂಸ್ಥೆಗಳು ಸರ್ಕಾರದ ಜತೆ ಕೈಜೋಡಿಸಿವೆ. ಇದರಲ್ಲಿ ಐಟಿ ಕಂಪನಿಗಳು, ಎನ್‌ಜಿಒಗಳು, ದಾನಿಗಳು, ಸಮುದಾಯ ಪಾಲ್ಗೊಳ್ಳುವಿಕೆ ಹೆಚ್ಚಿದೆ. ಇವುಗಳಲ್ಲಿ ಶೇ 20ರಷ್ಟು ಸಂಸ್ಥೆಗಳು ಶಾಲಾ ಶೈಕ್ಷಣಿಕ ಚಟುವಟಿಕೆಗಳ ಅಭಿವೃದ್ಧಿಗೆ ನೆರವಾಗುತ್ತಿದ್ದರೆ, ಉಳಿದ ಸಂಸ್ಥೆಗಳು ಮೂಲ ಸೌಕರ್ಯ ವೃದ್ಧಿಗೆ ಕೊಡುಗೆ ನೀಡುತ್ತಿವೆ. ಕೆಲ ಸಂಸ್ಥೆಗಳು ಮಕ್ಕಳಲ್ಲಿ ವಿವಿಧ ಬಗೆಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಇವೆಲ್ಲದರ ಪರಿಣಾಮ ಸರ್ಕಾರಿ ಶಾಲೆಗಳು ಸಶಕ್ತವಾಗುತ್ತಿರುವುದರ ಜತೆಗೆ ಇಲ್ಲಿನ ಮಕ್ಕಳ ಕಲಿಕಾ ಸಾಮರ್ಥ್ಯವೂ ಹೆಚ್ಚಾಗುತ್ತಿದೆ ಎನ್ನುತ್ತಾರೆ ಬೆಂಗಳೂರು ದಕ್ಷಿಣ (ವಲಯ-4) ಕ್ಷೇತ್ರ ಶಿಕ್ಷಣಾಧಿಕಾರಿ ಸಲೀಂ ಪಾಷಾ.

ಕನ್ನಡ ಶಾಲೆಗೆ ಬಂತು 'ಪ್ಲೇ ಸ್ಕೂಲ್'

ಕಾಡುಗೋಡಿ ಸಮೀಪದ ಶೀಗೆಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 246 ವಿದ್ಯಾರ್ಥಿಗಳಿದ್ದಾರೆ. ಇಲ್ಲಿಗೆ ಸಮೀಪದಲ್ಲಿಯೇ ಸುಮಾರು 10 ಖಾಸಗಿ, ಇಂಗ್ಲಿಷ್ ಮಾಧ್ಯಮ ಶಾಲೆಗಳಿವೆ. ಈ ಖಾಸಗಿ ಶಾಲೆಗಳಿಗೆ ಮತ್ತಷ್ಟು ಸ್ಪರ್ಧೆ ನೀಡುವ ಸಲುವಾಗಿ ಪ್ರಸಕ್ತ ವರ್ಷದಿಂದ ಇಲ್ಲಿ 'ಪ್ಲೇ ಸ್ಕೂಲ್' ತೆರೆಯಲು ಶಿಕ್ಷಣ ಇಲಾಖೆ ಅವಕಾಶ ಕೊಟ್ಟಿದೆ. ಅವಸರ್ ಫೌಂಡೇಷನ್‌ನವರು ತಮ್ಮ ಸಿಎಸ್‌ಆರ್ ಚಟುವಟಿಯಡಿ 'ಪ್ಲೇ ಸ್ಕೂಲ್' ನಡೆಸುತ್ತಿದ್ದಾರೆ. ಈ ವರ್ಷ ಎಲ್‌ಕೆಜಿಗೆ 24 ಮಕ್ಕಳು ದಾಖಲಾಗಿದ್ದು ಎಲ್ಲರಿಗೂ ಸಮವಸ್ತ್ರ, ಶೂ, ಸಾಕ್ಸ್, ಪಠ್ಯ, ಆಟಿಕೆಗಳನ್ನು ಉಚಿತವಾಗಿ ಒದಗಿಸಿದೆ. ಅಲ್ಲದೆ ಬೋಧಿಸಲು ನುರಿತ ಶಿಕ್ಷಕರನ್ನು ನಿಯೋಜಿಸಿದೆ.

ಶೀಗೆಹಳ್ಳಿ ಪ್ರಾಥಮಿಕ ಶಾಲೆಯಲ್ಲಿ ತೆರೆದಿರುವ 'ಪ್ಲೇಸ್ಕೂಲ್'ನಲ್ಲಿ ಕಲಿಯುತ್ತಿರುವ ಪುಟಾಣಿಗಳು

ದಾಖಲೆ ಬರೆದ 'ವಿಲನ್'

ಸಿನಿಹನಿ

ಶಿವಣ್ಣ - ಸುದೀಪ್ ಅಭಿನಯದ 'ದಿ ವಿಲನ್' ಚಿತ್ರ ಬಿಡುಗಡೆಯಾದ ನಂತರ ಇಡೀ ಚಿತ್ರತಂಡ ಸುದ್ದಿಗೋಷ್ಠಿ ಕರೆದು, ಗೆಲುವಿನ ಖುಷಿಯನ್ನು ಹಂಚಿಕೊಂಡಿತ್ತು. ಅಂದು ನಡೆದ ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ಸಿ.ಆರ್. ಮನೋಹರ್ ಅವರು 'ಈ ಚಿತ್ರ ಮಾಡಿರುವ ಕಲೆಕ್ಷನ್ ಬಹುಶಃ ಮೂವತ್ತು ಕೋಟಿ ರೂಪಾಯಿ' ಎಂದು ಹೇಳಿದ್ದರು.

ಅವರು ಅಂದು ನೀಡಿದ್ದು ಅಕ್ಟೋಬರ್ 21ರವರೆಗಿನ ಕಲೆಕ್ಷನ್‌ನ ಮಾಹಿತಿ. ಈಗ ಇನ್ನಷ್ಟು ಹೊಸ ಮಾಹಿತಿಗಳು ಹೊರಬರುತ್ತಿವೆ. 'ಮೊದಲ ವಾರದಲ್ಲಿ ವಿಲನ್ ಚಿತ್ರ ನಂಬಲು ಅಸಾಧ್ಯ ಎನ್ನುವಂತಹ ಕಲೆಕ್ಷನ್ ಮಾಡಿದೆ. ಕನ್ನಡ ಸಿನಿಮಾ ಉದ್ಯಮದ ಮಟ್ಟಿಗೆ ವಿಲನ್ ಚಿತ್ರದ ಕಲೆಕ್ಷನ್ ಸಾರ್ವಕಾಲಿಕ ದಾಖಲೆ' ಎನ್ನುತ್ತಿವೆ ಮೂಲಗಳು.



'ವಿಲನ್' ಚಿತ್ರದಲ್ಲಿ ಶಿವಣ್ಣ

ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ - ಧಾರವಾಡಗಳಂತಹ ಪ್ರಮುಖ ನಗರಗಳನ್ನು ಹೊರತುಪಡಿಸಿದರೆ, ಸಣ್ಣ ಪಟ್ಟಣಗಳಲ್ಲಿ 'ಒಳ್ಳೆಯ ಸಿನಿಮಾ ಬಂದರೆ ಮಾತ್ರ ಬಾಗಿಲು ತೆರೆಯುವ' ಚಿತ್ರಮಂದಿರಗಳು ಕೆಲವು ಇವೆಯಂತೆ. 'ದಿ ವಿಲನ್' ಚಿತ್ರ ಅಂತಹ ಚಿತ್ರಮಂದಿರಗಳ ಬಾಗಿಲು ತೆರೆಸುವಲ್ಲಿ ಯಶಸ್ಸು ಕಂಡಿದೆ ಎನ್ನುತ್ತಿವೆ ಮೂಲಗಳು.

ದಿ ವಿಲನ್ ಚಿತ್ರದ ಮೊದಲ ವಾರದ ಕಲೆಕ್ಷನ್ ₹ 50 ಕೋಟಿಗಿಂತ ಹೆಚ್ಚಿದೆ. ಎರಡನೆಯ ವಾರದ ಕಲೆಕ್ಷನ್ ₹ 20 ಕೋಟಿಗೂ ಹೆಚ್ಚು. ಎರಡನೆಯ ವಾರ ಕೊನೆಗೊಳ್ಳಲು ಇನ್ನೂ ಕೆಲವು ದಿನಗಳು ಇವೆ. ಹಾಗಾಗಿ, ಕಲೆಕ್ಷನ್ ಮೊತ್ತ ಇನ್ನಷ್ಟು ಹೆಚ್ಚಬಹುದು ಎನ್ನಲಾಗುತ್ತಿದೆ.

ಚಿತ್ರದ ವೀಕ್ಷಣೆಗೆ ನಿಗದಿ ಮಾಡಿರುವ ಟಿಕೆಟ್ ದರ ಹೆಚ್ಚು ಎಂಬ ಆಕ್ಷೇಪ ಆರಂಭದಲ್ಲಿ ಒಮ್ಮೆ ವ್ಯಕ್ತವಾಗಿತ್ತು. 'ಒಳ್ಳೆಯ ಸಿನಿಮಾ ಮಾಡಿದ್ದೇವೆ. ಹಾಗಾಗಿ ಒಂಚೂರು ಹೆಚ್ಚು ಹಣ ನೀಡಿ' ಎಂದು ಚಿತ್ರತಂಡ ಆಗ ಮನವಿ ಮಾಡಿತ್ತು. ಆಗಿನ ಆಕ್ಷೇಪಕ್ಕೆ ಹೆಚ್ಚಿನ ಬಲ ದೊರೆತಿಲ್ಲ ಎಂಬ ರೀತಿಯಲ್ಲಿ ಇದೆ ಈಗ ಆಗಿರುವ ಕಲೆಕ್ಷನ್.

ನಗರದಲ್ಲಿ ಇಂದು

ಈಜು ಸ್ಪರ್ಧೆ: 5ರಿಂದ 17ವರ್ಷದೊಳಗಿನ ಮಕ್ಕಳಿಗೆ. ಅತಿಥಿ- ಭಾಸ್ಕರ್ ರಾವ್. ಆಯೋಜನೆ- ರೋಟರಿ ಕ್ಲಬ್ ಆಫ್ ಬೆಂಗಳೂರು. ಸ್ಥಳ- ನೆಟ್ಟಕಲ್ಲಪ್ಪ ಈಜು ಕೇಂದ್ರ, ಡೆಕ್ಕನ್ ಇಂಟರ್‌ನ್ಯಾಷನಲ್ ಸ್ಕೂಲ್, ಸುಬ್ರಹ್ಮಣ್ಯಪುರ. ಬೆಳಿಗ್ಗೆ 10.30

ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್‌ನ ವಾರ್ಷಿಕ ಸಮಾವೇಶ: ಅತಿಥಿಗಳು- ಡಿ.ವಿ.ಸದಾನಂದಗೌಡ, ಸುರೇಶ್ ಪ್ರಭು. ಸನ್ಮಾನ- ಡಾ. ಎಂ.ವಿ. ರಾಜೀವ್ ಗೌಡ, ಎಂ.ಎಸ್.ಬೋಜೆಗೌಡ. ಆಯೋಜನೆ- ದಿ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್. ಸ್ಥಳ- ದಿ ಲಲಿತ್ ಅಶೋಕ, ಕುಮಾರಕೃಪ ರಸ್ತೆ, ಹೈಗ್ರೌಂಡ್ಸ್. ಬೆಳಿಗ್ಗೆ 10.30

ಮಕ್ಕಳ ಉತ್ಸವ: ಯು.ಕೆ, ಜಿಂಬಾಬ್ವೆ, ಜೆಕ್ ರಿಪಬ್ಲಿಕ್, ಇಥಿಯೋಪಿಯಾ, ಸ್ವಿಡ್ಜರ್‌ಲೆಂಡ್, ಸ್ಪೇನ್, ಭಾರತದಲ್ಲಿನ ದಿ ರಾಯನ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಶಿಕ್ಷಕರು ಸಿದ್ಧಪಡಿಸಿರುವ 'ಶೇಪಿಂಗ್ ದಿನ ಫ್ಯೂಚರ್' ಶೋ. ಆಯೋಜನೆ- ರಾಯನ್ ಇಂಟರ್‌ನ್ಯಾಷನಲ್ ಸ್ಕೂಲ್. ಸ್ಥಳ- ಎಂಎಲ್‌ಆರ್ ಸಭಾಂಗಣ, ದೇವಸಂದ್ರ ಕೈಗಾರಿಕಾ ಬಡಾವಣೆ, ಮಹಾದೇವಪುರ, ವೈಟ್‌ಫೀಲ್ಡ್. ಬೆಳಿಗ್ಗೆ 11

ಪಿ.ಸಿ. ಸರ್ಕಾರ್ ಮ್ಯಾಜಿಕ್ ಶೋ. ಆಯೋಜನೆ: ಪ್ರಿಯಾ ಕಲ್ಚರಲ್, ಸ್ಥಳ: ಟೌನ್‌ಹಾಲ್, ಸಂಜೆ 4 ಮತ್ತು 7

**ಸಾಯಿ ನೃತ್ಯ